

ನೀಲಿ ನೊಣಹಿಡುಕ

# ‘ಬಹುತ್ವ ಭಾರತ’ದ ಹಕ್ಕಿಲೋಕ–ವರ್ಣಲೋಕ

■ ನಾಗರಾಜ್ ಚಟ್ನಳ್ಳಿ

ಹಕ್ಕಿಗಳ ಸಾರ್ಥಕ್ಯ ಇರುವುದು ಅವುಗಳ ಹಾರುವಿಕೆಯಲ್ಲಿ. ರೆಕ್ಕೆಬಿಚ್ಚಿ ಬಾನಲ್ಲಿ ಹಾರುತ್ತ ಹಾರುತ್ತ ತನ್ನ ಗಮ್ಯ ಸೇರುವ ಹಕ್ಕಿಗಳ ಬಗ್ಗೆ ಮನುಷ್ಯನಿಗೆ ಮೊದಲಿನಿಂದಲೂ ವಿಚಿತ್ರ ಆಕರ್ಷಣೆ. ಗಮನಿಸಿ ನೋಡಿ, ರೆಕ್ಕೆಗಳಷ್ಟೇ ಅಲ್ಲ, ಹಕ್ಕಿಗಳಿಗೆ ಮತ್ತೊಂದು ಆಕರ್ಷಣೆಯೂ ಇದೆ; ಅದು ಬಣ್ಣ.

ಒಂದು ಜಾತಿಯ ಹಕ್ಕಿಯಂತೆ ಇನ್ನೊಂದು ಪ್ರಭೇದದ ಬಾನಾಡಿಯ ಬಣ್ಣವಿಲ್ಲ. ಯಾರೋ ಕಾಣದ ಕಲೆಗಾರನೊಬ್ಬನ ಕುಂಚದಲ್ಲಿ ಮಿಂದುಬಂದಂತೆ ಹಕ್ಕಿಗಳು ಕಾಣಿಸುತ್ತವೆ. ಪ್ರಕೃತಿಯ ಅಪೂರ್ವ ಕಲಾಕೃತಿಗಳಂತೆ ಕಂಗೊಳಿಸುವ ಪಕ್ಷಿಗಳು, ಈಗಷ್ಟೇ ಮುಗಿಲ ಬಯಲಿನಲ್ಲಿ ಓಕುಳಿಯಾಡಿ ಬಂದಂತೆಯೂ ಕಾಣಿಸುತ್ತವೆ.

ಹಕ್ಕಿಗಳದು ಅದೆಂಥ ವೈವಿಧ್ಯ – ಹೆಬ್ಬೆಟ್ಟಿನ ಗಾತ್ರದ ಬಾನಾಡಿಯಿಂದ ಸಣ್ಣ ಕುದುರೆಯಷ್ಟು ಗಾತ್ರದ ಗಾತ್ರದ ಉಷ್ಟ್ರಪಕ್ಷಿಯವರೆಗೆ! ಜೊತೆಗೆ ಅವುಗಳ ವರ್ಣ ವೈವಿಧ್ಯವೂ ದಂಗುಬಡಿಸುವಂತಹದ್ದು. ಪರಿಸರದ ಬಣ್ಣಗಳನ್ನೆಲ್ಲ ಸೂರೆಗೊಂಡಂತೆ ಕಾಣಿಸುವ ಅವುಗಳ ವರ್ಣ ವಿಲಾಸವನ್ನು ಎದೆತುಂಬಿಕೊಳ್ಳುವ ಸಹೃದಯರನ್ನು ಕಲ್ಪನಾ ವಿಲಾಸಕ್ಕೆ ಕೊಂಡೊಯ್ಯುವಷ್ಟು ಪ್ರಭಾವಶಾಲಿಯಾದುದು.

ಇಲ್ಲಿನ ಚಿತ್ರಪಟವನ್ನೇ ನೋಡಿ: ಮುಗಿಲಿನ ನೀಲಿ, ಮಲ್ಲಿಗೆಯ ಬಿಳುಪು, ಸೂರ್ಯಕಾಂತಿಯ ಹೊಂಬಣ್ಣ, ಗುಲಾಬಿಯ ಕೆಂಪು, ಎಲೆಗಳ ಹಸಿರು – ಹೀಗೆ, ಪ್ರಕೃತಿಯ ಬಣ್ಣಗಳೆಲ್ಲ ಹಕ್ಕಿಗಳ ಮೈಸೇರಿದಂತಿದೆ. ಈ ಹಕ್ಕಿಗಳ ವರ್ಣವಿಲಾಸವೇ ಹೀಗಾದರೆ, ನವಿಲಿನ ವರ್ಣ ವೈವಿಧ್ಯವನ್ನು ಬಣ್ಣಿಸುವುದಾದರೂ ಹೇಗೆ? ವಿವಿಧ ಬಣ್ಣಗಳ ಈ ಹಕ್ಕಿಗಳು ‘ಬಹುತ್ವ ಭಾರತ’ದ ಪ್ರತಿನಿಧಿಗಳಂತೆಯೂ ಕಾಣಿಸುತ್ತವೆ. ಹಾಗೆ ನೋಡಿದರೆ, ಹಕ್ಕಿಗಳೇ ವಾಸಿ – ಅವುಗಳಿಗೆ ದೇಶ–ಸೀಮೆಯ ಹಂಗಿಲ್ಲ. ಯಾವುದೋ ದೇಶದ ಹಕ್ಕಿ ಸಾವಿರಾರು ಮೈಲು ದೂರದ ಸೀಮೆಗೆ ಹೋಗಿ ಸಂತಾನೋತ್ಪತ್ತಿ ನಡೆಸಿ ಮತ್ತೆ ತವರಿನ ಹಾದಿ ಹಿಡಿಯುತ್ತದೆ. ‘ವಿಶ್ವಮಾನವ’ ಎನ್ನುವ ಮನುಕುಲದ ಆದರ್ಶ, ಹಕ್ಕಿಲೋಕದಲ್ಲಿ ಅಕ್ಷರಶಃ ಸಾಕಾರಗೊಂಡಿದೆ.



ಹೊನ್ನಕ್ಕಿ



ಹಳದಿ ನೆತ್ತಿಯ ಮರಕುಟಿಗ



ಹರಳು ಚೋರೆ ಹಕ್ಕಿ



